**CW : 2**

PW : 2

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.1563/2025

ಸಾಕ್ಷಿದಾರರ ಹೆಸರು : ಪ್ರಶಾಂತ್ ಪಿ

ತಂದೆಯ ಹೆಸರು : ತಮ್ಮಣ್ಣ

ಪ್ರಾಯ : 39

ಉದ್ಯೋಗ ಪೋ ಮುಖ್ಯ ಪೇದೆ, ಬೆಳ್ತಂಗಡಿ ಪೋ ಠಾಣೆ

ವಾಸಸ್ಥಳ : ಉಜಿರೆ

ದಿನಾಂಕ:**24.02.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ನಾನು ಮಾರ್ಚ್ 2020 ರಿಂದ ಮಾರ್ಚ್ 2025 ರ ವರೆಗೆ ಪುತ್ತೂರು ಗ್ರಾಮಾಂತರ ಪೋ ಠಾಣೆಯಲ್ಲಿ ಮುಖ್ಯ ಪೇದೆ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ದಿ.9-02-2025 ರಂದು ಸಾಯಂಕಾಲ 5.45 ರ ಸಮಯದಲ್ಲಿ ಚಾಸಾ-1 ರವರ ಜೊತೆ ನಾನು, ಚಾಸಾ-3 ಮತ್ತು 4 ರವರೊಡನೆ ಪುತ್ತೂರು ತಾಲ್ಲೂಕು ಆರ್ಯಾಪು ಗ್ರಾಮದ ಸಂಪ್ಯ ಪೋ. ಠಾಣೆ ಎದುರು ಇರುವ ಮಾಣಿ-ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನ ತಪಾಸಣೆ ಮಾಡುತ್ತಿದ್ದೆವು. ಸುಮಾರು 5.55 ರ ಸಮಯ ಕುಂಬ್ರ ಕಡೆ ರಸ್ತೆಯಿಂದ ಪುತ್ತೂರು ಕಡೆಗೆ ಕೆಎ-21-ಇಸಿ-3378 ನೊಂದಣಿ ಸಂ ಯ ಬೈಕ್ ಬಂದಿದ್ದು ನಾವು ಎಲ್ಲಾ ವಾಹನಗಳನ್ನು ತಪಾಸಣೆ ಮಾಡುತ್ತಾ ಆ ವಾಹನವನ್ನು ಕೂಡಾ ತಪಾಸಣೆ ಮಾಡಿದಾಗ ಹಿಂಬದಿ ಸವಾರ ಹೆಲ್ಮೆಟ್ ಧರಿಸಿರಲಿಲ್ಲ. ಅದ್ದರಿಂದ ಚಾಸಾ-1 ರವರ ಸೂಚನೆ ಮೇರೆಗೆ ಸ್ಕೂಟರನ್ನು ರಸ್ತೆಯ ಬದಿ ನಿಲ್ಲಿಸಿದ್ದು ಚಾಸಾ-1 ರವರು ಸ್ಕೂಟರ್ ಸವಾರನಿಗೆ ಹಿಂಬದಿಯ ಸವಾರ ಹೆಲ್ಮೆಟ್ ಧರಿಸಿಲ್ಲದಿರುವ ಕಾರಣ ಅಪರಾಧವಾಗಿದ್ದು ಅದಕ್ಕೆ ದಂಡ ಕಟ್ಟಬಹುದೆಂದು ಅಥವಾ ಮಾನ್ಯ ನ್ಯಾಯಾಲಯದಲ್ಲಿ ದಂಡ ಪಾವತಿಸಬಹುದೆಂದು ಹೇಳಿದ್ದು ಅದಕ್ಕೆ ವಾಹನದ ಸವಾರ ರೂ.500 ದಂಡ ಪಾವತಿಸಿ ರಶೀದಿ ಪಡೆದಿರುತ್ತಾನೆ.

ನಂತರ ಸುಮಾರು 6.00 ಗಂಟೆ ವೇಳೆಗೆ ದಂಡ ಕಟ್ಟಿ ದ್ವೇಷಗೊಂಡಂತಹ ಸ್ಕೂಟರ್ನ ಹಿಂಬದಿ ಸವಾರ ಚಾಸಾ-1 ರವರಿಗೆ ನಾನು ದಂಡವನ್ನು ಪಾವತಿಸುವುದಿಲ್ಲ, ನೀವು ಏನು ಬೇಕಾದರೂ ಮಾಡಿಕೊಳ್ಳಿ ನಿಮಗೆ ಕಣ್ಣು ಕಾಣಿಸುವುದಿಲ್ಲವೇ ಎಂದು ಜೋರಾಗಿ ಬೊಬ್ಬೆ ಹಾಕಿ ಹೆದ್ದಾರಿಯ ಮೇಲೆ ಬ್ಯಾರಿಕೇಡ್

ಹಾಕಿ ವಾಹನ ತಪಾಸಣೆ ಮಾಡಲು ನಿಮಗೆ ಅಧಿಕಾರ ಕೊಟ್ಟವರು ಯಾರು ಎಂದು ಉಡಾಫೆಯಿಂದ ಮಾತನಾಡಿ ನಿಮ್ಮಂತಹ ದರಿದ್ರ ಪೊಲೀಸಿನವರು ಏನು ಡ್ಯೂಟಿ ಮಾಡುತ್ತಿದ್ದೀರಾ ಎಂದು ಗೊತ್ತಿದೆ 24 ಗಂಟೆ ರಸ್ತೆಯಲ್ಲೇ ನಿಂತು ದಂಡ ಹಾಕಿ ಎಂದು ಹೇಳಿ ಆತ ಚಾಸಾ-1 ರವರಿಗೆ ಮುಷ್ಟಿ ಮಾಡಿ ಗುದ್ದಲು ಪ್ರಯತ್ನಿಸಿ ಎರುದನಿಯಲ್ಲಿ ಏಕವಚನದಲ್ಲಿ ಮಾತನಾಡಿ ಹೇಗೆ ಕೇಸು ಹಾಕುತ್ತೀರಾ ನೋಡಿಕೊಳ್ಳುತ್ತೇನೆ ಎಂದು ಹೇಳಿ ನಾವು ಇತರ ವಾಹನ ತಪಾಸಣೆ ಮಾಡಲು ನಮಗೆ ಅಡ್ಡಿಪಡಿಸಿ ನಮ್ಮ ಒಂದಿಗೆ ಅನುಚಿತವಾಗಿ ವರ್ತಿಸಿ ನಮ್ಮ ಸರ್ಕಾರೀ ಕರ್ತವ್ಯಕ್ಕೆ ಅಡ್ಡಿಪಡಿಸಿ ಸಾರ್ವಜನಿಕರ ಶಾಂತಿಭಂಗಕ್ಕೆ ದಕ್ಕೆಯುಂಟುಮಾಡಿರುತ್ತಾನೆ. ನಂತರ ನಾನು ಆತನನ್ನು ಪೋ ಠಾಣೆಗೆ ಕರೆದುಕೊಂಡು ಹೋಗಿದ್ದು ಚಾಸ-1 ರವರು ಆತನನ್ನು ವಿಚಾರಣೆ ಮಾಡಿದಾಗ ಆತನ ಹೆಸರು ಪ್ರತಾಪ್ ಗೌಡ ಎಂದು ಗೊತ್ತಾಗಿದೆ. ಈ ಬಗ್ಗೆ ನನ್ನನ್ನು ವಿಚಾರಣೆ ಮಾಡಿದ್ದಾರೆ.

ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಈ ದಿನ ನ್ಯಾಯಾಲಯಕ್ಕೆ ಆರೋಪಿ ಗೈರುಹಾಜರಾಗಿದ್ದು ಆತನ ಗುರುತಿಸುವಿಕೆ ಬಗ್ಗೆ ಆರೋಪಿ ಪರ ವಕೀಲರು ತಮ್ಮ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

ಪಾಟೀ ಸವಾಲುಃಆರೋಪಿತರ ಪರ ವಕೀಲರಿಂದಃ

ಸಮಯಾವಕಾಶ ಕೋರಿದ್ದು ನೀಡಲಾಗಿದೆ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1 ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.